

ರಾಯಚೂರು ಗುಡ್ಡದ ಮೇಲಿಂದ ಕಾಣುವ ದರ್ಗಾ ಹಾಗೂ ಕೇಂದ್ರ ಬಸ್ ನಿಲ್ದಾಣ



ಮಂಡಕ್ಕಿ ಮಿರ್ಚಿ


ಮಾಡ್ಕೊಂಡಂಗ ಇಲ್ಲೆಲ್ಲ ಅಲ್ಪಪ್ರಾಣನೇ ಭಾಳ. ಔದು, ಆಲು, ಆವು, ಊವಾ (ಹೌದು, ಹಾಲು, ಹಾವು, ಹೂವಾ) ಹಿಂಗ ಹಕಾರ ಅಕಾರ ಆಗ್ತದ. ಊಟ ಮಾತ್ರ ಖಾರಖಾರನೇ ಇರ್ತದ.

ಅದಕ್ಕೇ ರಾಯಚೂರಿನ ಖಡಾ ಚಮಚ್ ಚಾ ಭಾಳ ಓಡ್ತದ. ಇದೇನಮ್ಮ... ಇಂಗತಿದ್ದಿ.. ಖಡಾನೂ ಅಂತಿದ್ದಿ ಓಡ್ತದೂ ಅಂತಿದ್ದಿ.. ಬ್ಯಾಡಬಿಡು ಅದರ ಸುದ್ದಿ ಅಂದ್ರ ನಮ್ಮ ವರ್ಣನಾ ಶುರು ಅಂತಲೇ ಲೆಕ್ಕ. ಚಾ ಗ್ಲಾಸಿನಾಗ ಹುಯ್ ಅಂತ ಸಕ್ರಿ ಸುರದು, ಚಮಾ ಲೋಟಕ್ಕ ಅಂಟಲಾರದ್ಹಂಗ ಖಡಿ ನಿಲ್ಲೂದೆ ಖಡಾ ಚಮಚ್ ಚಾಯ್. ಚಾ ಕುಡದು, ಆ ಸಕ್ರಿ ತಿಂದು ಮೊಣಕೈಗೆ ಬಾಯಿ ವರಸ್ಕೊಂಡು ಹೊಂಟ್ರ ಬಿಸಿಲಿಗೆ ಸೆಡ್ಡು ಹೊಡದ್ಹಂಗ.

ಒಗ್ಗಣ್ಣಿ, ಭಜಿ, ಪುಗ್ಗಿ ಸುದ್ದಿ ಹೇಳಿದ್ಹಂಗ ನಮ್ಮೂರಿನ ಗುಣಪಾಂಗಲಿ ಸುದ್ದಿ ಹೇಳಬೇಕಲ್ಲ. ಬ್ಯಾರೆ ಕಡೆ ಪಡ್, ಪಡ್ಡು ಅಂತ ಕರೆಯಿಸಿಕೊಳ್ಳುವ ಗುಣಪಾಂಗಲಿ ನಮ್ಮೂರಾಗ ಗುಂಡಪಾಂಗಲಿ, ಅಂತೆಲ್ಲ ಹೆಸರು ಬದಲಿ ಮಾಡ್ಕೊಂಡಾವ. ಮಸ್ತ್ ಹಸಿಮೆಣಸಿನಕಾಯಿ, ನೆನಿಸಿಟ್ಟ ಕಡಲಿಬ್ಯಾಳಿ ಕಾಳು, ಹಾಕಿದ ಗುಣಪಾಂಗಲಿಗೆ ಅಂತಲೇ ತಿಳಿ ಚಟ್ನಿ ಮಾಡ್ತೀವಿ. ಇಲ್ಲಿ ಗಟ್ಟಿ ಚಟ್ನಿ ಮಾಡಿದ್ರ ಎದಿ ಉರೀತದ ಅಂತಾರ. ಕೊಬ್ಬರಿ ಬಳಕಿ ಕಡಿಮಿ. ಕೊಬ್ಬರಿಗೆ ಪುಠಾಣಿ ಪುಡಿ ಹಾಕಿ ರುಬ್ಬಿ ನೀರು ಹಾಕ್ಕೊಂಥ ಅಗ್ದಿ ತಿಳಿಸಾರಿನ ಹದಕ್ಕ ತರತಾರ. ಇದಕ್ಕ ಘಮ್ಮನ್ನುವ ಸಾಸಿವಿ ಒಗ್ಗರಣಿ ಕೊಟ್ರ, ಬಿಸಿಬಿಸಿ ಪಡ್ಡಿನ ಕಾವು ಹೀರಾಕ ರೆಡಿ ಆಗ್ತದ ಈ ಚಟ್ನಿ. ಇಡ್ಲಿಗೂ ಇಂಥಾದ್ದೇ ತಿಳಿ ಚಟ್ನಿ ಮಾಡ್ತಾರ. ಕರಿಬೇವು ಕೊತ್ತಂಬರಿ ಸಣ್ಣಗೆ ಕತ್ತರಿಸಿಕೊಂಡು ಮೈ ಚೆಲ್ಲಿರ್ತಾವ. ಯಾವ ಕಲಾವಿದನೂ ಈ ಕಾಂಬಿನೇಷನ್ನಿನ ಚಿತ್ರ ಬರಿಯಾಕ ಸಾಧ್ಯನೇ ಇಲ್ರಿ.

ಸೂರ್ಯಾಸ್ತದ
ಕೆಂಬಣ್ಣದ ಆಕಾಶನೂ
ಇನ್ನೂ ಚಿತ್ರಿಸಾಕ ಸಾಧ್ಯ ಆಗಿಲ್ಲಂತ. ಹಂಗೇ
ನಮ್ಮೂರಿನ ಚಿತ್ರಣ ಹಿಂಗ ಭಾಷಾದಾಗ
ಊಟದಾಗ ಹೇಳಾಕ ಆಗೂದೆ ಇಲ್ಲ.

ಇನ್ನ ಇಲ್ಲಿಯ ಮಸಾಲಿ ರೊಟ್ಟಿ ಕತಿ ಹೇಳಲಿಕ್ರ ಕತಿ ಮುಗಿಯೂದಿಲ್ಲ. ಕಡಕ್ ರೊಟ್ಟೀನೆ ಎಣ್ಣ್ಯಾಗ



ಕಳೆದ ವಾರದ 'ಚೆನ್ನುಡಿ'
'ಮಲೆನಾಡಿನ ನಮ್ಮೂರಂದ್ರೆ...' ಕೇಳಿ...
ಎಸ್‌.ಪಿ. ವಿಜಯಲಕ್ಷ್ಮಿ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಕರದು, ಸೇಂಗಾ ಮತ್ತು ಗುರೆಳ್ಳು ಚಟ್ನಿ ಪುಡಿ ಉದುರಿಸಿ, ಕಟ್ಟಿ ಕೊಡ್ತಾರ. ಅಲ್ಲೇ ತಿನ್ನೂದಾದ್ರ ಅದಕ್ಕೇನೆ ಉಳ್ಳಾಗಡ್ಡಿ, ಟೊಮೆಟೊ ಹೆಚ್ಚಿ, ಕೊಚ್ಚಿ ಮ್ಯಾಲೆ ಉದುರಿಸಿಕೊಡ್ತಾರ. ಆಹಹಾ... ಒಂದು ಸಲೆ ಶುರು ಮಾಡಿದ್ರ ರೊಟ್ಟಿಪುಟ್ಟಿ (ಬುಟ್ಟಿ) ಖಾಲಿಯಾಗೂತನಾನೂ ತಿನ್ಕೊಂತನೇ ಇರ್ತೀವಿ.

ದೊಡ್ಡ ಫರಾತಿನಾಗ ಇವೆಲ್ಲ ಹಾಕ್ಕೊಂಡು ಒಟ್ಗೆ ಉಣ್ಣೂದು, ಅಂಗಳದಾಗ ಕುಂತು ಬೆಳದಿಂಗಳನ್ನ ಗುಟುಕರಿಸ್ಕೊಂತ, ಬೆಳದಿಂಗಳ ಊಟ ಮಾಡೂದು, ಮ್ಯಾಳಗಿ ಮ್ಯಾಲೆ ಕುಂತು ಕತಿ ಕೇಳೂದು ಎಲ್ಲಾ ರಾಯಚೂರಿನ ರಾತ್ರಿಗಳನ್ನ ರಂಗೀನು ಮಾಡ್ತಾವ. ಈಗಲೂ ಅಲ್ಲಿ ಅಂಗಳ, ಹಿತ್ತಲು, ಮ್ಯಾಳಗಿ ಇರುವ ಮನಿ ಅದಾವನ್ನೂದೆ ತಂಪನಿಸ್ತದ. ಮತ್ತ ಪ್ರತಿ ಅಂಗಳ, ಹಿತ್ತಲದಾಗೂ ದಾಸವಾಳ, ನಂದಿಬಟ್ಟಲು, ಬಗೆಬಗೆಯ ಮಲ್ಲಿಗೆ ಬಳ್ಳಿ ಹಬ್ಬಿಕೊಂಡು ಬೆಳದು ಘಮಘಮಿಸುವಹಂಗ ಮಾಡ್ತಾವ.

ಸೂರ್ಯನ ಬೆಳಕು ಹೀರೂದ್ರೊಳಗ ಚಂದ್ರನ ಜೊತಿಗೆ ಜಿದ್ದಿಗೆ ಬೀಳ್ತಾವ ಇಲ್ಲಿಯ ಬಂಡೆಗಲ್ಲಿನ ಬೆಟ್ಟಗಳು. ಇಡೀ ದಿನ ಸೂರ್ಯ ಕಾಡ್ತಾನ. ರಾತ್ರಿ ಇವೂ ಬಿಸಿಲು ಉಗಳ್ತಾವ. ಅದಕ್ಕೇನೆ ಮಂದೀನೂ ಅಲ್ಲಲ್ಲಿ ಉಗಳ್ಕೊಂತ ಇರ್ತಾರ. ಏನರೆ ಯಾಕ ಮಾಡವಲ್ರು. ಅವರ ಮನಸು ಮಾತ್ರ ಅತಿ ಶುಭ್ರ. ಅವರು ಹಾಕುವ ಬಿಳಿ ವಸ್ತ್ರದ್ಹಂಗ.